ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/02/ಎಲ್ಆರ್‌ಡಿಸಿ/2017-18 / 1173

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:31-07-2017

-:ಸುತ್ತೋಲೆ:-

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಲ್ಲಿ ರ‍್ಯಾಗಿಂಗ್ ತಡೆಗಟ್ಟುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/11/ಎಲ್ಆರ್‌ಡಿಸಿ/2016-17 ದಿನಾಂಕ:01-08-2016.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ವಿದ್ಯಾಸಂಸ್ಥೆಗಳಲ್ಲಿ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ರ‍್ಯಾಗಿಂಗ್ ತಡೆಗಟ್ಟುವ ಸಂಬಂಧ ಕ್ರಮ ಜರುಗಿಸಲು ಈಗಾಗಲೇ ಉಲ್ಲೇಖಿತ ಪತ್ರದನ್ವಯ ಸೂಚಿಸಲಾಗಿದೆ (ಪ್ರತಿ ಲಗತ್ತಿಸಿದೆ). 2017-18ನೇ ಶೈಕ್ಷಣಿಕ ಸಾಲಿನ ತರಗತಿಗಳು ಈಗಾಗಲೇ ಪ್ರಾರಂಭವಾಗಿರುವುದರಿಂದ ರ‍್ಯಾಗಿಂಗ್‌ಗೆ ಸಂಬಂಧಿಸಿದಂತೆ ಸಂಸ್ಥೆ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಉಲ್ಲೇಖದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕಟ್ಟು ನಿಟ್ಟಿನ ಕ್ರಮ ಜರುಗಿಸಲು ಮತ್ತೊಮ್ಮೆ ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು
31/7/17

ಇವರಿಗೆ,

1. ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ/ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗದ ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

ಸಂ: ಡಿಟಿಇ/11/ಎಲ್‌ಆರ್‌ಡಿಸಿ/2016-17

ನಿರ್ದೇಶಕರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ.
ಬೆಂಗಳೂರು
ದಿನಾಂಕ: 1.8.2016

## ಸುತ್ತೋಲೆ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಸಂಸ್ಥೆ/ವಿದ್ಯಾರ್ಥಿ ನಿಲಯಗಳಲ್ಲಿ ರ್‍ಯಾಗಿಂಗ್ ತಡೆಗಟ್ಟುವ ಕ್ರಮಗಳ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 02 ಎಲ್‌ಆರ್‌ಡಿಸಿ 2012-13 ದಿನಾಂಕ:12.7.2013
ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಇವರ ಅಧಿಸೂಚನೆ ದಿನಾಂಕ: 01.07.2009

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿದ್ಯಾಸಂಸ್ಥೆಗಳಲ್ಲಿ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ರ್‍ಯಾಗಿಂಗ್ ತಡೆಗಟ್ಟಲು ಈ ಕೆಳಕಂಡಂತೆ ಕ್ರಮ ಜರುಗಿಸುವುದು.

ರ್‍ಯಾಗಿಂಗ್ ತಡೆಗಟ್ಟಲು ಜರುಗಿಸಬೇಕಾದ ಕ್ರಮಗಳು

1. ಪ್ರತಿ ಸಾಲಿನ ಪ್ರವೇಶಾತಿಯ ವೇಳೆಯಲ್ಲಿ ರ್‍ಯಾಗಿಂಗ್‌ನಲ್ಲಿ ಭಾಗವಹಿಸುವುದು ಮತ್ತು ಪ್ರೋತ್ಸಾಹಿಸುವುದನ್ನು ನಿಷೇಧಿಸಲಾಗಿದ್ದು, ಮತ್ತು ಅನ್ವಯಿತ ಶಿಕ್ಷೆಗಳ ಸಂಬಂಧಿ ಮಾಹಿತಿಯನ್ನು ಜಾಹಿರಾತು ನೀಡಿ ಪ್ರಚಾರಪಡಿಸುವುದು.
2. ಸಂಸ್ಥೆಯ ಮಾಹಿತಿಯುಳ್ಳ ಕೈಪಿಡಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳಂತೆ ತಪ್ಪದೆ ರ್‍ಯಾಗಿಂಗ್ ಎಂದರೇನು ಮತ್ತು ತಡೆಗಟ್ಟುವ ಸಂಬಂಧಿ ಉಪಕ್ರಮಗಳ ಬಗ್ಗೆ ಮುದ್ರಿಸುವುದು. (ಅನುಬಂಧ-1, 2 ಮತ್ತು 3 ನ್ನು ಅವಲೋಕಿಸುವುದು)
3. ಸಂಸ್ಥೆ/ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಹೊಂದಿದ ಪ್ರತಿಯೊಬ್ಬ ವಿದ್ಯಾರ್ಥಿ ಹಾಗೂ ಪೋಷಕರಿಂದ ರ್‍ಯಾಗಿಂಗ್ ತಡೆಗಟ್ಟುವ ಕ್ರಮಗಳ ಬಗ್ಗೆ ಹಾಗೂ ರ್‍ಯಾಗಿಂಗ್‌ನಲ್ಲಿ ಭಾಗವಹಿಸಿದ ಪಕ್ಷದಲ್ಲಿ ಎದುರಿಸಬೇಕಾದ ಶಿಕ್ಷೆಗಳ ಬಗ್ಗೆ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆಯುವುದು. (ಅನುಬಂಧ-2 ಅವಲೋಕಿಸುವುದು)
4. ರ್‍ಯಾಗಿಂಗ್ ಸಂಬಂಧಿ ಪರಿಣಾಮಗಳ ಬಗ್ಗೆ ಮತ್ತು ಜರುಗಿಸುವ ಕಠಿಣ ಶಿಕ್ಷೆಗಳ ಬಗ್ಗೆ ಸಂಸ್ಥೆಗಳ ಸೂಚನಾ ಫಲಕವಲ್ಲದೆ, ರ್‍ಯಾಗಿಂಗ್ ಸಂಭಾವ್ಯ ಸ್ಥಳಗಳಲ್ಲಿ ದೊಡ್ಡದಾದ ಭಿತ್ತಿ ಪತ್ರಗಳ ಮೂಲಕ ಪ್ರಚಾರ ನೀಡುವುದು.
5. ಸಂಸ್ಥೆ/ವಿದ್ಯಾರ್ಥಿನಿಲಯಗಳಲ್ಲಿ ಸೂಕ್ತವಾದ ಸುರಕ್ಷಾ ಸಿಬ್ಬಂದಿಯನ್ನು ನೇಮಿಸಿ ರ್‍ಯಾಗಿಂಗ್ ಸಂಭಾವ್ಯ ಸ್ಥಳಗಳಿಗೆ ಪ್ರತಿನಿತ್ಯ ಭೇಟಿ ನೀಡಿ ಪರೀಕ್ಷಿಸಲು ಸೂಚಿಸುವುದು.
6. ಹೊಸದಾಗಿ ಸೇರ್ಪಡೆ ಹೊಂದಿದ ವಿದ್ಯಾರ್ಥಿಗಳಿಗೆ ಆಯೋಜಿಸುವ ಪ್ರೇರಣಾ ಕಾರ್ಯಕ್ರಮದ ಸಮಯದಲ್ಲಿ ರ್‍ಯಾಗಿಂಗ್ ತಡೆಗಟ್ಟುವ ಸಂಬಂಧ ಹಾಗೂ ರ್‍ಯಾಗಿಂಗ್‌ನಲ್ಲಿ ಭಾಗವಹಿಸಿದ್ದಲ್ಲಿ ಎದುರಿಸಬೇಕಾದ ಶಿಕ್ಷೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು.

7. ರ್ಯಾಗಿಂಗ್ ತಡೆಗಟ್ಟುವ ನಿಟ್ಟಿನಲ್ಲಿ ಎಐಸಿಟಿಇ ಯ ಅಧಿಸೂಚನೆಯಂತೆ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಸಂಸ್ಥೆಯ ಹಿರಿಯ ಉಪನ್ಯಾಸಕರು, ಪೋಷಕರು ಮತ್ತು ಸ್ಥಳಿಯ ಪೋಲಿಸ್ ಅಧಿಕಾರಿಗಳನ್ನೊಳಗೊಂಡಂತೆ ರ್ಯಾಗಿಂಗ್ ಪ್ರತಿಬಂಧಕ ಒಂದು ಸಮಿತಿಯನ್ನು ರಚಿಸುವುದು ಹಾಗೂ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮತ್ತು ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಪರಿಪಾಲಿಸುವುದು. (ಅನುಬಂಧ-5ನ್ನು ಅವಲೋಕಿಸುವುದು)
8. ಸಂಸ್ಥೆಯ/ವಿದ್ಯಾರ್ಥಿ ನಿಲಯಗಳ ಆವರಣಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳನ್ನೊಳಗೊಂಡ ರ್ಯಾಗಿಂಗ್ ಪ್ರತಿಬಂಧಕ ಪಡೆಯನ್ನು ನೇಮಿಸಿ ದಿನದ 24 ಗಂಟೆಗಳು ಪರಿವೀಕ್ಷಣೆ ಮಾಡುವ ಬಗ್ಗೆ ಕ್ರಮ ಜರುಗಿಸುವುದು ಹಾಗೂ ರ್ಯಾಗಿಂಗ್ ನಡೆಯುವುದು ಕಂಡು ಬಂದಲ್ಲಿ ಕೂಡಲೇ ಮೇಲಿನ ರ್ಯಾಗಿಂಗ್ ಪ್ರತಿಬಂಧಕ ಸಮಿತಿಯ ಗಮನಕ್ಕೆ ತರುವುದು.
9. ಈ ಎಲ್ಲಾ ದಾಖಲಾತಿಗಳನ್ನು ಸಂಸ್ಥೆಯ ಹಂತದಲ್ಲಿ ದಾಖಲಿಸಿಡುವುದು.

<u>ರ್ಯಾಗಿಂಗ್ ಸಂಭವಿಸಿದ ಸಮಯದಲ್ಲಿ ಜರುಗಿಸಬೇಕಾದ ಕ್ರಮಗಳು</u>

10. ಸಂಸ್ಥೆಯ/ವಿದ್ಯಾರ್ಥಿ ನಿಲಯದ ಆವರಣದಲ್ಲಿ ರ್ಯಾಗಿಂಗ್ ಪ್ರಕರಣವು ಜರುಗಿದರೆ ಕೂಡಲೇ ಸಂಬಂಧಪಟ್ಟ ಸ್ಥಳೀಯ ಪೊಲೀಸ್ ಠಾಣೆಯಲ್ಲಿ **ಎಫ್ಐಆರ್** ದಾಖಲಿಸುವುದು. ಸದರಿ ಮಾಹಿತಿಯನ್ನು ಸಂಸ್ಥೆಯ ಪ್ರಾಚಾರ್ಯರು ಕೂಡಲೇ ನಿರ್ದೇಶನಾಲಯದ ಗಮನಕ್ಕೆ ತರುವುದು.
11. ಈ ಮಾಹಿತಿಯನ್ನು ಕೂಡಲೇ ರ್ಯಾಗಿಂಗ್ ಪ್ರತಿಬಂಧಕ ಸಮಿತಿಯ ಗಮನಕ್ಕೆ ತರುವುದು, ಸಮಿತಿಯು ಅನುಬಂಧ-3 ರನುಸಾರ ಸೂಕ್ತ ಕ್ರಮ ಜರುಗಿಸುವುದು. ತೆಗೆದುಕೊಂಡ ಕ್ರಮದ ಬಗ್ಗೆ ದಾಖಲೆಗಳೊಂದಿಗೆ ನಿರ್ದೇಶನಾಲಯಕ್ಕೆ ಮಾಹಿತಿಯನ್ನು ನೀಡುವುದು.
12. ಸಂಸ್ಥೆಯ/ವಿದ್ಯಾರ್ಥಿ ನಿಲಯಗಳ ಆವರಣದ ಒಳಗೆ/ಹೊರಗೆ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳು ರ್ಯಾಗಿಂಗ್ ಸಂಬಂಧಿ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಲ್ಲಿ ಹಾಗೂ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಸೆಕ್ಷನ್ 116 ಕರ್ನಾಟಕ ಶಿಕ್ಷಣ ಕಾಯಿದೆ 1983ರಡಿಯಲ್ಲಿ **ಎಫ್ಐಆರ್** ದಾಖಲಾದ ಪ್ರಕರಣಗಳ ಮಾಹಿತಿಯನ್ನು ಸಹ ಪ್ರತಿ ತಿಂಗಳು ಪೊಲೀಸ್ ಠಾಣೆಯಿಂದ ಪಡೆದು ನಿರ್ದೇಶನಾಲಯಕ್ಕೆ ಸಲ್ಲಿಸುವುದು. (ಅನುಬಂಧ-4ನ್ನು ಅವಲೋಕಿಸುವುದು)

ಮೇಲಿನ ಎಲ್ಲಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಮಾಹಿತಿಯನ್ನು ದಾಖಲಿಸಿ ರ್ಯಾಗಿಂಗ್‌ಅನ್ನು ಸಂಪೂರ್ಣವಾಗಿ ತಡೆಗಟ್ಟುವಲ್ಲಿ ಲಗತ್ತಿಸಿದ ಅನುಬಂದ-1, 2, 3 ಮತ್ತು 5ನ್ನು ಅಭ್ಯಸಿಸಿ ಪ್ರತಿ ತಿಂಗಳು ವರದಿಯನ್ನು ಅನುಬಂಧ-4 ರಲ್ಲಿ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಅನುಬಂಧ-5 ರ ಅಧಿಸೂಚನೆಯಂತೆ ಸಂಸ್ಥೆಯ ವಿರುದ್ಧ ಸೂಕ್ತ ಕ್ರಮವನ್ನು ಇಲಾಖೆ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯು ಜರುಗಿಸುವುದು ಎಂಬ ಎಚ್ಚರಿಕೆ ಅಂಶವನ್ನು ಸಹ ತಮ್ಮ ಗಮನಕ್ಕೆ ತರಲಾಗಿದೆ.

ನಿರ್ದೇಶಕರು

**ಲಗತ್ತುಗಳು:** ಅನುಬಂಧ-1, 2, 3, 4 ಮತ್ತು 5

**ಗೆ,**

1. ಇಲಾಖೆಯಡಿಯಲ್ಲಿ ಬರುವ **ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರುಗಳ** ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಇ-ಆಡಳಿತ ವಿಭಾಗದ ಸೂಕ್ತ ಕ್ರಮಕ್ಕಾಗಿ
3. ಕಡತ ಪ್ರತಿ

o/c